# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಮಧು ಜಿ. ಮಾದೇಗೌಡ(ಪದವೀಧರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **366** |
| ಉತ್ತರಿಸಬೇಕಾದ ದಿನಾಂಕ | : 10.12.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ವಸತಿ ಯೋಜನೆಯಡಿ ನೈಜ ಫಲಾನುಭವಿಗಳಿಗೆ ದೊರೆಯಬೇಕಿದ್ದ ಸಹಾಯಧನವನ್ನು ಅನ್ಯರ ಖಾತೆಗೆ ವರ್ಗಾಯಿಸಿ ಕೋಟ್ಯಂತರ ರೂಪಾಯಿ ಅಕ್ರಮವೆಸಗಿರುವ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಪಿಎಮ್ಎವೈ (ಗ್ರಾಮೀಣ) ಯೋಜನೆಯಡಿ ನೈಜ ಫಲಾನುಭವಿಗಳಿಗೆ ದೊರೆಯಬೇಕಿದ್ದ ಸಹಾಯಧನವನ್ನು ಅನ್ಯರ ಖಾತೆಗೆ ವರ್ಗಾಯಿಸಿ ಕೋಟ್ಯಂತರ ರೂಪಾಯಿ ಅಕ್ರಮವೆಸಗಿರುವ ಪ್ರಕರಣಗಳು ಹಾಸನ ಮತ್ತು ಕೋಲಾರ ಜಿಲ್ಲೆಗಳಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಇದ್ದಲ್ಲಿ, ಈ ರೀತಿಯ ಪ್ರಕರಣಗಳು ಯಾವ ಯಾವ ಗ್ರಾಮ ಪಂಚಾಯತಿಗಳಲ್ಲಿ ಬೆಳಕಿಗೆ ಬಂದಿವೆ? (ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಹೆಸರಿನೊಂದಿಗೆ ಸಂಪೂರ್ಣ ವಿವರ ನೀಡುವುದು) | ಪ್ರಕರಣಗಳ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ಒಟ್ಟು ಎಷ್ಟು ಸಂಖ್ಯೆಯ ಫಲಾನುಭವಿಗಳಿಗೆ ತಲುಪಬೇಕಿದ್ದ ಸಹಾಯಧನದ ಮೊತ್ತವನ್ನು ಅನರ್ಹರ ಖಾತೆಗೆ ಜಮೆ ಮಾಡಲಾಗಿದೆ? ಅನ್ಯರ ಖಾತೆಗೆ ವರ್ಗಾಯಿಸಲ್ಪಟ್ಟ ಒಟ್ಟು ಮೊತ್ತ ಎಷ್ಟು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)ರಡಿ ಫಲಾನುಭವಿಗಳಲ್ಲದವರ ಆಧಾರ್ ಸಂಖ್ಯೆಯನ್ನು Awassoft ವೆಬ್‌ಸೈಟಿನಲ್ಲಿ ನಮೂದು ಮಾಡಿ ಫಲಾನುಭವಿಗಳಲ್ಲದವರ ಬ್ಯಾಂಕ್ ಖಾತೆಗೆ ಅನುದಾನ ಬಿಡುಗಡೆಯಾಗುವಂತೆ ಮಾಡಿ ಹಣ ದುರ್ಬಳಕೆಯಾಗಿರುವ ಬಗ್ಗೆ, ಹಾಸನ ಜಿಲ್ಲೆಯ ವಿವಿಧ ತಾಲ್ಲೂಕುಗಳು ಹಾಗೂ ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ ಹರಟಿ ಗ್ರಾಮ ಪಂಚಾಯಿತಿಗಳಲ್ಲಿ ವರದಿಯಾಗಿರುತ್ತದೆ.<br><br>ಹಾಸನ ಜಿಲ್ಲೆ:<br>**ತಾಲ್ಲೂಕ** / **ಅನುದಾನ ಬಿಡುಗಡೆಯಾಗಿರುವ ಫಲಾನುಭವಿಗಳಲ್ಲದವರ ಸಂಖ್ಯೆ** / **ಅನುದಾನ ದುರ್ಬಳಕೆ**<br>ಹಾಸನ / 25 / 7,50,000<br>ಆಲೂರು / 2 / 60,000<br>ಸಕಲೇಶಪುರ / 288 / 2,56,80,000<br>ಅರಸೀಕೆರೆ / 93 / 27,90,000<br>**ಒಟ್ಟು** / **408** / **2,92,80,000**<br><br>ಕೋಲಾರ ಜಿಲ್ಲೆ:<br>**ತಾಲ್ಲೂಕ** / **ಅನುದಾನ ಬಿಡುಗಡೆಯಾಗಿರುವ ಫಲಾನುಭವಿಗಳಲ್ಲದವರ ಸಂಖ್ಯೆ** / **ಅನುದಾನ ದುರ್ಬಳಕೆ**<br>ಕೋಲಾರ / 15 / 15,30,000 |
| ಈ) | ಇಂತಹ ಪ್ರಕರಣಗಳಲ್ಲಿ ಅಕ್ರಮವೆಸಗಿರುವ ಆರೋಪಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವುದು ಸೇರಿದಂತೆ ಹಣ ವಸೂಲಾತಿಗೆ ಕೈಗೊಂಡಿರುವ ಕ್ರಮಗಳೇನು? (FIR ಪ್ರತಿ ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು) | ಹಾಸನ ಮತ್ತು ಕೋಲಾರ ಜಿಲ್ಲೆಯ ಜಿಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವರದಿಯಲ್ಲಿ ಸದರಿ ಪ್ರಕರಣಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ತಾಲ್ಲೂಕು ನೋಡೆಲ್ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವರು ನೇರ ಹೊಣೆಗಾರರಾಗಿವುದಾಗಿ ತಿಳಿಸಿದ್ದು, ಅದರನ್ವಯ ಈ ಕೆಳಕಂಡ ಅಧಿಕಾರಿಗಳ ಮೇಲೆ FIR ದಾಖಲಿಸಿ ಕೆಲಸದಿಂದ ವಜಾಗೊಳಿಸಿರುತ್ತಾರೆ:<br><br>ಕ್ರ.ಸಂ. / ಹೆಸರು / ಹುದ್ದೆ / ಷರಾ<br>1. / ಶ್ರೀ ರಾಜೇಶ್ M K / ತಾಲ್ಲೂಕು ನೋಡೆಲ್ ಅಧಿಕಾರಿ, ಸಕಲೇಶಪುರ ಹಾಗೂ ಜಿಲ್ಲಾ ನೋಡೆಲ್ ಅಧಿಕಾರಿ (ಹೆಚ್ಚುವರಿ ಪ್ರಭಾರ) / ದಿನಾಂಕ: 08.08.2025 ರಂದು FIR ದಾಖಲಿಸಿ ಕರ್ತವ್ಯದಿಂದ ದಿನಾಂಕ:11.08.2025 ರಂದು ಬಿಡುಗಡೆಗೊಳಿಸಲಾಗಿರುತ್ತದೆ.<br>2. / ಶ್ರೀ ಪಾಲಾಕ್ಷ / ತಾಲ್ಲೂಕು ನೋಡೆಲ್ ಅಧಿಕಾರಿ, ಅರಸೀಕೆರೆ ತಾಲ್ಲೂಕ / ದಿನಾಂಕ 30.08.2025 ರಂದು FIR ದಾಖಲಿಸಿ ಕರ್ತವ್ಯದಿಂದ ದಿನಾಂಕ:30.08.2025 ರಂದು ಬಿಡುಗಡೆಗೊಳಿಸಲಾಗಿರುತ್ತದೆ. |

| | | | | | |
|---|---|---|---|---|---|
| | | 3. | ಶ್ರೀ ಗುರುಮೂರ್ತಿ M R | ತಾಲ್ಲೂಕು ನೋಡಲ್ ಅಧಿಕಾರಿ, ಹಾಸನ | ದಿನಾಂಕ 14.10.2025 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ. ದಿನಾಂಕ: 04.11.2025 ರಂದು FIR ದಾಖಲಿಸಲಾಗಿದೆ. |
| | | 4. | ಶ್ರೀ ಚಿದಾನಂದ ಎಂ | ತಾಲ್ಲೂಕು ನೋಡಲ್ ಅಧಿಕಾರಿ, ಹಾಸನ-ಇಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ | ದಿನಾಂಕ 04.11.2025 ರಂದು FIR ದಾಖಲಿಸಿ ಕರ್ತವ್ಯದಿಂದ ದಿನಾಂಕ:05.11.2025 ರಂದು ಬಿಡುಗಡೆಗೊಳಿಸಲಾಗಿರುತ್ತದೆ. |
| | | 5 | ಶ್ರೀ ಮಂಜುನಾಥ | ತಾಲ್ಲೂಕು ನೋಡಲ್ ಅಧಿಕಾರಿ, ಕೋಲಾರ ತಾಲ್ಲೂಕು | ದಿನಾಂಕ 11.08.2025 ರಂದು FIR ದಾಖಲಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. |
| | | 6. | ಶ್ರೀ ಕುಮಾರಸ್ವಾಮಿ N | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಾಣಾವರ ಗ್ರಾಮ ಪಂಚಾಯಿತಿ | ದಿನಾಂಕ 30.08.2025 ರಂದು FIR ದಾಖಲಿಸಿ ಸೇವೆಯಿಂದ ದಿನಾಂಕ:30.08.2025 ರಂದು ಅಮಾನತ್ತುಗೊಳಿಸಲಾಗಿರುತ್ತದೆ. |
| | | 7 | ಶ್ರೀ ಬ್ಯಾಟರಾಯಗೌಡ | ಗ್ರೇಡ್-1 ಕಾರ್ಯದರ್ಶಿ, ಮರ್ಕುಲಿ ಗ್ರಾಮ ಪಂಚಾಯಿತಿ (ಹಿಂದಿನ ಗ್ರಾ.ಪಂ. ಕಾರ್ಯದರ್ಶಿ ಗ್ರೇಡ್-1, ಅಂಕಪುರ ಗ್ರಾ.ಪಂ) | ದಿನಾಂಕ 12.09.2025 ರಂದು ಸೇವೆಯಿಂದ ಅಮಾನತ್ತು ಗೊಳಿಸಲಾಗಿರುತ್ತದೆ. |
| | | FIR ಪ್ರತಿ ಲಗತ್ತಿಸಿದೆ. | | | |
| ಉ) | ನೈಜ ಫಲಾನುಭವಿಗಳಿಗೆ ಹಣ ಮರಳಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಫಲಾನುಭವಿಗಳಲ್ಲದವರ ಖಾತೆಗೆ ಜಮಾ ಆಗಿರುವ ಅನುದಾನವನ್ನು ಸದರಿಯವರಿಂದ ವಸೂಲಾತಿ ಮಾಡಿ, Awassoft ನಲ್ಲಿ ತಪ್ಪಾಗಿ ನಮೂದು ಆಗಿರುವ ಆಧಾರ್ ಅನ್ನು delete ಮಾಡಿ ನೈಜ ಫಲಾನುಭವಿಯ ಆಧಾರ್ ಸಂಖ್ಯೆಯನ್ನು ನಮೂದು ಮಾಡಲು ತಾಲ್ಲೂಕು ಅನುಷ್ಠಾನಾಧಿಕಾರಿಗಳಿಗೆ ತಿಳಿಸಿದೆ. ನೈಜ ಫಲಾನುಭವಿಯ ಆಧಾರ್ ಸಂಖ್ಯೆ ನಮೂದಾದ ನಂತರ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಿಂದ ಅನುದಾನ ಬಿಡುಗಡೆ ಕ್ರಮವಹಿಸಲಾಗುತ್ತಿದೆ. | | | |

ಸಂಖ್ಯೆ: ವಇ 479 ಹೆಚ್‌ಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

Annexure to LCQ 366

| ಕ್ರ. ಸಂಖ್ಯೆ | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ |
|---|---|---|---|
| 1 | ಹಾಸನ | ಸಕಲೇಶಪುರ | ಆನೇಮಹಲ್ |
| 2 | ಹಾಸನ | ಸಕಲೇಶಪುರ | ಬಾಗೆ |
| 3 | ಹಾಸನ | ಸಕಲೇಶಪುರ | ಬಾಳ್ಳುಪೇಟೆ |
| 4 | ಹಾಸನ | ಸಕಲೇಶಪುರ | ಬ್ಯಾಕರವಳ್ಳಿ |
| 5 | ಹಾಸನ | ಸಕಲೇಶಪುರ | ಚಂಗಡಿಹಳ್ಳಿ |
| 6 | ಹಾಸನ | ಸಕಲೇಶಪುರ | ದೇವಲದಕೆರೆ |
| 7 | ಹಾಸನ | ಸಕಲೇಶಪುರ | ಹಲಸುಲಿಗೆ |
| 8 | ಹಾಸನ | ಸಕಲೇಶಪುರ | ಹಾನುಬಾಳು |
| 9 | ಹಾಸನ | ಸಕಲೇಶಪುರ | ಹೆಬ್ಬಸಾಲೆ |
| 10 | ಹಾಸನ | ಸಕಲೇಶಪುರ | ಹೆತ್ತೂರು |
| 11 | ಹಾಸನ | ಸಕಲೇಶಪುರ | ಹೊಂಗಡಹಳ್ಳ |
| 12 | ಹಾಸನ | ಸಕಲೇಶಪುರ | ಹೊಸೂರು |
| 13 | ಹಾಸನ | ಸಕಲೇಶಪುರ | ಐಗೂರು |
| 14 | ಹಾಸನ | ಸಕಲೇಶಪುರ | ಕ್ಯಾಮನಹಳ್ಳಿ |
| 15 | ಹಾಸನ | ಸಕಲೇಶಪುರ | ಕುನಿಗನಹಳ್ಳಿ |
| 16 | ಹಾಸನ | ಸಕಲೇಶಪುರ | ಕುರುಬತ್ತೂರು |
| 17 | ಹಾಸನ | ಸಕಲೇಶಪುರ | ಮಳಲಿ |
| 18 | ಹಾಸನ | ಸಕಲೇಶಪುರ | ಉಚ್ಚಂಗಿ |
| 19 | ಹಾಸನ | ಸಕಲೇಶಪುರ | ವಣಗೂರು |
| 20 | ಹಾಸನ | ಸಕಲೇಶಪುರ | ಯಸಳೂರು |
| | | | |
| 1 | ಹಾಸನ | ಅರಸೀಕೆರೆ | ಬಾಣಾವರ |
| 2 | ಹಾಸನ | ಅರಸೀಕೆರೆ | ಹಬ್ಬನಘಟ್ಟ |
| 3 | ಹಾಸನ | ಅರಸೀಕೆರೆ | ಅರಕೆರೆ |
| | | | |
| 1 | ಹಾಸನ | ಹಾಸನ | ಬೈಲಹಳ್ಳಿ |
| 2 | ಹಾಸನ | ಹಾಸನ | ಕಾರ್ಲೆ |
| 3 | ಹಾಸನ | ಹಾಸನ | ಕೋರವಂಗಲ |
| 4 | ಹಾಸನ | ಹಾಸನ | ಸೀಗೆ |
| 5 | ಹಾಸನ | ಹಾಸನ | ಶಾಂತಿಗ್ರಾಮ |
| | | | |
| 1 | ಹಾಸನ | ಆಲೂರು | ಗಂಜಿಗೆರೆ |
| | | | |
| 1 | ಕೋಲಾರ | ಕೋಲಾರ | ಹರಟಿ |